(ಶ್ರೀ ಜಿ. ರಾಮೇಗೌಡ)

ಹೇಳುತ್ತೇನೆ. ಸರ್ಕಾರದವರು ಲಕ್ಷಗಟ್ಟಲೇ ಹಣವನ್ನೇನೋ ಖರ್ಚು ಮಾಡುತ್ತಾರೆ, ಆದರೆ ಕೆಲಸಗಳು ಸಮರ್ಪಕವಾಗಿ ನಡೆಯುವುದಿಲ್ಲ. ದಕ್ಷತೆ ಇಲ್ಲದೇ ಇರತಕ್ಕ ಅಧಿಕಾರಿಗಳನ್ನು ಸೂಕ್ಷ್ಮವಾದ ರೀತಿಯಲ್ಲಿ ಕಂಡುಹಿಡಿದು ಅವರನ್ನು ಬದಲಾಯಿಸಿ. ಅವರನ್ನು ಬೇಕಾದರೆ ನಿಮ್ಮ ಆಫೀಸುಗಳಲ್ಲಿ ಇಟ್ಟುಕೊಳ್ಳಿ. ಅವರನ್ನು ಜನತೆಯ ಸೇವೆಗೆ ಬಿಡಬೇಡಿ. ದಕ್ಷತೆ ಇಲ್ಲದ ಅಧಿಕಾರಿಗಳಿಂದ, ಲಂಚಕೋರ ಅಧಿಕಾರಿಗಳಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಧರ್ಮ ರೀತಿಯಲ್ಲಿ ಉತ್ತಮ ಕೆಲಸವನ್ನು ಮಾಡತಕ್ಕ ಅಧಿಕಾರಿಗಳನ್ನು ಜನತೆಯ ಸೇವೆಯನ್ನು ಮಾಡುವುದಕ್ಕೆ ಹಾಕಿ. ಆಗ ಅವರು ಒಳ್ಳೆಯ ರೀತಿಯಿಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಒತ್ತಿ ಒತ್ತಿ ಹೇಳುತ್ತೇನೆ.

ಇನ್ನು ಕೊನೆಯದಾಗಿ ಒಂದೇ ಒಂದು ಸಲಹೆಯನ್ನು ನಾನು ಕೊಡುತ್ತೇನೆ. ತಹಶೀರ್ದಾರರು ಅಸಿಸ್ಟೆಂಟ್ ಕಮೀಷನರು, ಮತ್ತು ಡೆಪ್ಯುಟೀ ಕಮೀಷನರು ಈ ಮೂರು ಮಟ್ಟದಲ್ಲಿ ಇವೊತ್ತು ವ್ಯವಹಾರ ನಡೆಯುತ್ತಿದೆ. ಆದ್ದರಿಂದ ಈಗ ಡೆಪ್ಯುಟೀ ಕಮೀಷನರಿಗೆ ಇರತಕ್ಕ ಅಧಿಕಾರವನ್ನು ಅಸಿಸ್ಟೆಂಟ್ ಕಮೀಷನರಿಗಾಗಲೀ, ತಹಶೀರ್ದಾರರಿಗಾಗಲೀ, ಕೊಡುವುದಿಲ್ಲ. ಇದರಿಂದಾಗಿ ಈ ಮೂರು ಮಟ್ಟಗಳಲ್ಲಿಯೂ ಕೆಲಸ ನಡೆಸುವುದಕ್ಕೆ ಅಸಾಧ್ಯವಾಗುತ್ತದೆ. ಕೆಲಸಗಳನ್ನು ಜಾಗ್ರತೆಯಾಗಿ ಮಾಡುವುದಕ್ಕಾಗುವುದಿಲ್ಲ. ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ತಾಲ್ಲೂಕು ಮಟ್ಟದಲ್ಲಿ ಹೆಚ್ಚು ಅಧಿಕಾರವನ್ನು ಕೊಡಬೇಕು. ಆ ಕೆಲಸಗಳನ್ನು ಅವರು ನಿರ್ವಹಿಸುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು. ಈ ಪ್ರಕಾರ ಕೆಲಸಗಳನ್ನು ವಹಿಸಿಕೊಟ್ಟು ಅದರ ಬಗ್ಗೆ ಸರ್ಕಾರದವರು ಹೆಚ್ಚು ಗಮನ ನೀಡಬೇಕು. ಈಗ ದೇಶದಲ್ಲಿ ಇರತಕ್ಕ ಅಭಾವ ಪರಿಸ್ಥಿತಿಯನ್ನು ನೀಗಲು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದರ ಜೊತೆಗೆ ಈ ಅಭಾವ ಪರಿಸ್ಥಿತಿಯನ್ನು ಹೋಗರಾಡಿಸಲು ಒಂದು ಶಾಶ್ವತವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-ಎ).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಅಭಾವ ಪರಿಸ್ಥಿತಿಯ ಸೂಚನೆಯನ್ನು ಕುರಿತು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ನಾನು ಅಪೇಕ್ಷೆ ಮಾಡುತ್ತೇನೆ. ಅನೇಕ ಮಾನ್ಯ ಸದಸ್ಯರು ಈಗಾಗಲೇ ಈ ಬಗ್ಗೆ ವಿಪುಲವಾಗಿ ಚರ್ಚೆ ಮಾಡಿದ್ದಾರೆ. ಮತ್ತು ಅವರು ಉತ್ತಮವಾದ ಸಲಹೆಗಳನ್ನು ಸೂಚನೆಗಳನ್ನೂ ಕೊಟ್ಟು ಯಾವ ರೀತಿಯಲ್ಲಿ ಅಭಾವ ಪರಿಸ್ಥಿತಿಯನ್ನು ನೀಗಿಸಬೇಕು ಎಂಬುದನ್ನು ಹೇಳಿದ್ದಾರೆ. ನನ್ನ ಮಿತ್ರರು ಈಗಾಗಲೇ ಹೇಳಿದಹಾಗೆ ನಾನು 150ಮೈಲಿ ಕರಾವಳಿ ಪ್ರದೇಶವುಳ್ಳ ದಕ್ಷಿಣಕನ್ನಡ ಜಿಲ್ಲೆಯಿಂದ ಇಲ್ಲಿಗೆ ಚುನಾಯಿತನಾಗಿ ಬಂದಿದ್ದೇನೆ. ಕಡಲನ ಕಡು ಮಡಿಲಲ್ಲಿರತಕ್ಕ ದಕ್ಷಿಣ ಕನ್ನಡ ಜಿಲ್ಲೆ ಇವೊತ್ತು.....

ಶ್ರೀ ವಾಟಾಳ್ ನಾಗರಾಜ್.—ಸ್ಪಾಮಿ ಇವೊತ್ತೋ ಮುಗಿಸುತ್ತೀರಾ ಅಥವಾ ನಾಳೆಗೂ ಅವಕಾಶ ಇದೆಯೋ? ನಾವು ಇಲ್ಲಿ ಏತಕ್ಕೆ ಬಂದಿದ್ದೇವೆ ಅಂತ ತಿಳಿದುಕೊಂಡಿದ್ದೀರಾ, ನಮಗೆ ಮಾತನಾಡಲಿಕ್ಕೆ ಬರೋದಿಲ್ಲ ಎಂದು ತಿಳಿದುಕೊಂಡಿದ್ದೀರಾ?

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಸ್ವಲ್ಪ ಸಾವಧಾನದಿಂದ ಮಾತನಾಡಬೇಕು. ಅವರ ಏಪ್ ಅವರ ಲಿಸ್ಟ್ ಕೊಟ್ಟಿದ್ದಾರೆ. ಸದಸ್ಯರಿಗೆ ಏನಾದರೂ ಗ್ರೀವೆನ್ಸಸ್ ಇದ್ದರೆ, ಅವರ ಹತ್ತಿರ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್.—ನಾವು ಜನತೆಯ ಪ್ರತಿನಿಧಿಗಳು, ಜನತೆಯಿಂದ ಚುನಾಯಿತರಾಗಿ ಬಂದಿದ್ದೇವೆ. ನಾವು ಇಲ್ಲಿ ದನ ಕಾಯುವುದಕ್ಕೆ ಬಂದಿದ್ದೇವೆ ಎಂಬುದು ತಮ್ಮ ಭಾವನೆಯೇ? ನಿಮ್ಮ ನೀತಿಯನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭೆಯಿಂದ ಹೊರಗಡೆ ಹೊರಟು ಹೋದರು).

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ಪಾಮಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅದು ಏನೆಂದರೆ ವಿರೋಧ ಪಕ್ಷದಲ್ಲಿ, ಮತ್ತು ಆಡಳಿತ ಪಕ್ಷದಲ್ಲಿ ಬಹಳ ಜನ ಮಾತನಾಡುವವರು ಇದ್ದಾರೆ. ಈಗ ತಾನೆ ಮಾನ್ಯ ಅಧ್ಯಕ್ಷರ ಹತ್ತಿರ ಮಾನ್ಯ ಮುಖ್ಯಮಂತ್ರಿಗಳ ಸಮೇತ ಈ ವಿಷಯವನ್ನು ಇಷ್ಟು ಹೊತ್ತು ಚರ್ಚೆ ಮಾಡುತ್ತಿದ್ದೆವು. ಅದರ ಮೇಲೆ ಈ ದಿವಸ 8 ಘಂಟೆಯಾಗಲೇ 9 ಘಂಟೆಯಾಗಲೇ ಅಲ್ಲಯವರೆಗೂ ಕುಳಿತು ಚರ್ಚೆ ಮಾಡಬಹುದು, ನಾಳೆ ದಿವಸ